455

(ಮೈಸೂರು ಡಿಸ್ಟ್ರಿಕ್ಟ್)

ನಂ. 10 ತಾರೀಖು 27ನೇ ನವೆಂಬರ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ಅರಕಲ್‌ಗೂಡು ಸಬ್ ರಿಜಿಸ್ಟ್ರೀ ಆಫೀಸಿನಲ್ಲಿ ಬೇವಾರಸಾಗಿ ಇರತಕ್ಕ ಕೆಳಗೆ ವಿವರಿಸೋಣಾದ ದಸ್ತಾ ವೇಜುಗಳನ್ನು ಹಾಜರ್ ಮಾಡಿದವರೇ ಆಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರರಾಗಲಿ ಈ ನೋಟೀಸ್ ತಾರೀಖು ಲಾಗಾಯತು ಒಂದು ತಿಂಗಳ ಒಳಗಾಗಿ ಸಬ್ ರಿಜಿಸ್ಟ್ರಾರ್ ರೂಬರೂ ಹಾಜರಾಗಿ ಅವುಗಳನ್ನು ವಾಪಸ್ ತೆಗದುಕೊಳ್ಳಬೇಕು. ತಪ್ಪಿದರೆ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅವುಗಳು ನಾಶಪಡಿಸಲ್ಪಡುವವು.

ನಂಬರು.	ದಸ್ತಾವೇಜು ಬರೆದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರೆಸಿ ಕೊಂಡವನ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಿ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
74 ——— 1881—82	ಮರೂರು ಗ್ರಾಮದಲ್ಲಿರುವ ಶ್ರೀವೈಷ್ಣವ ಬ್ರಾಹ್ಮಣ ಶ್ರೀನಿವಾಸಯ್ಯನವರ ಮಗ ರಾಮಸ್ವಾಮಿ 1 ವೆಂಕಟೂಜಾರು 1	ಮರೂರು ಗ್ರಾಮದಲ್ಲಿ ಇರುವ ಸಾಂತರಾಜೆ ಅರಸಿನ ವರ ಮಗ ಚಿಕ್ಕ ಅರಸು	3—6—81	3—6—81	75 ರೂಪಾಯಿನ ಜಮ್ಮೀ ಸಂಬಂಧವಾದ ಭೋಗ್ಯ ಪತ್ರ.
75 ——— ಡಿಟೋ	ರಾಮನಾಥಪುರದಲ್ಲಿರುವ ಸಂಕೇತಿಬ್ರಾಹ್ಮಣ ನರಸಿಂಹ್ಮವಧಾನಿಗಳ ಮಗ ರಾಮಾವಧಾನಿ	ಅರಕಲ್‌ಗೂಡು ತಾಲ್ಲೂಕು ಕಚೇರಿ	4—6—81	4—6—81	302 ರೂಪಾಯಿನ ಜಾಮ್ಮೀ ಮುಚ್ಚಳಿಕೆ ಮೊಬಲಗ್ಯೆ ಭೂಸ್ಥಿತಿ ಯೀಡು ಮಾಡಿರುವದಾಗಿ.
125 ——— ಡಿಟೋ	ಸರ್ವ ಮಾನ್ಯ ಮಾಯಿಗೌಡನಹಳ್ಳಿಲ್ಲಿರುವಪಂಚಾಳದ ಜಾತಿ ಕೊಟ್ಟೂರಯ್ಯನವಗ ಬಡಾಇ ಕಸಬಿನಿಂದ ಜೀವಿಸುವ ವೀರಾಚಾರಿ	ಹಾಡ್ಯ ಗ್ರಾಮದಲ್ಲಿರುವ ವೀರಾಚಾರದ ದೊಡ್ಡ ಹಟ್ಟಿಚನ್ನವೀರಪ್ಪನ ಮಗ ಆ ಕಸಬಿನ ವೀರಭದ್ರಯ್ಯ	9—7—81	9—7—81	95 ರೂಪಾಯಿನ ಭೂಸ್ಥಿತಿ ಕ್ರಯ ಪತ್ರ.

ಅಬ್ದುಲ್‌ಖಾದರ್, ಕೆ. ಬಿ.
ರಿಜಿಸ್ಟ್ರಾರ್.

ಗವರ್ನ್‌ಮೆಂಟ್ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನ್ಯೆಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥವಾಗಿ ಗವರ್ನ್‌ಮೆಂಟ್ ಆಫೀಸರ್‌ಗಳು ಕೊಂಡು ಕೊಳ್ಳಬಹುದು, ಬಂದು ಸಲಕ್ಕೆ ಇಪ್ಪತ್ತು ಪೌಗಳು ತೆಗದುಕೊಳ್ಳುವ ಯಾವ ಮನುಷ್ಯನಾದರೂ ಕಲ್‌ಕತ್ತೆಯಲ್ಲಿ ಬೊಟೂನಿಕಲ್ ಗಾರ್ಡನ್ ಸೂಪರ್‌ಟೆಂಡೆಂಟರ ಹೆಸರಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡು ಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಒಂದಕ್ಕೆ ರೂ. 4—8—0; ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 8—8—0; ಒಂದು ಪೌ ಔಷಧವುಳ್ಳ ಡಬ್ಬಿಗೆ ರೂ. 16—8—0; ಬೊಟೂನಿಕಲ್ ಗಾರ್ಡನ್ ಸೂಪರ್‌ಟೆಂಡೆಂಟರು ಇದರಡಿ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಬದಗಿಸ ಬಹುದು; ನಾಲ್ಕು ಔನ್ಸ್‌ವುಳ್ಳ ಡಬ್ಬಿಬಂದಕ್ಕೆ ರೂ. 5—8—0, ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 10—8—0, ಒಂದು ಪೌವುಳ್ಳ ಡಬ್ಬಿಗೆ 20 ರೂಪಾಯಿ. ಈ ಔಷಧವು, ಕಲ್‌ಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯರ್ ಸ್ಟೇಟವ್ ಮದ್ದಿನಂಗಡಿಯವರಿಂದ ಮಾರಲ್ಪಡುತ್ತೆ. ಸದರೀ ಕಿಮ್ಮತ್ತಿನೊಂದಿಗೆ ದರ 4 ವ 8 ಔನ್ಸ್ ತಗರದ ಡಬ್ಬಿಗೆ ಎಂಟು ಆಣೆ ಟಪ್ಪಾಲ್ ಹಾಸಲೂ, ಒಂದು ಪೌ ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು.